ಕೂಡ ಈಚಲು ಗಿಡ ಇಲ್ಲವೇ ಇಲ್ಲ. ಒಂದೊಂದು ಕ್ಷೇತ್ರದಲ್ಲೂ ಹತ್ತನ್ನೆರಡು ಸಾವಿರ ಎಕರೆ ಸೇಂದಿ ವನ ಯಾವುದೇ ಕ್ರಮಕ್ಕೂ ಒಳಪಡದೇ ಹಾಗೆ ಉಳಿದುಬಿಟ್ಟಿದೆ. ದಯಮಾಡಿ ಈಗಲಾದರೂ ಆ ಸೇಂದಿವನವನ್ನು ಅದರ ವ್ಯಾಪ್ತಿಯಲ್ಲಿ ತಂದು ಮಂಜೂರು ಮಾಡುವುದಕ್ಕೆ ಅವಕಾಶ ಮಾಡಿಕೊಡಲಿಕ್ಕೆ ಕಾನೂನಿನ ತಿದ್ದುಪಡಿಯನ್ನು ತರಬೇಕು.

12.00 ಪಿ.ಎಂ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ : ಈಗ ಅರ್ಜಿ ಸಲ್ಲಿಸುವುದಕ್ಕೆ ಸಮಯಾವಕಾಶ ಕೊಡುವುದು ಒಂದು ಕಡೆ. ಇನ್ನೊಂದು ತಾಂತ್ರಿಕ ದೋಷವಿದೆ. ಏನೆಂದರೆ ಈಗ ಅರ್ಜಿ ಕೊಟ್ಟಿದ್ದಾರೆ, ಎಂಡಾರ್ಸ್‌ಮೆಂಟ್ ಕೂಡ ಇದೆ. ಆದರೆ ಅದು ಅರ್ಜಿ ಕೊಟ್ಟಿರುವುದು ರಿಜಿಸ್ಟರ್‌ನಲ್ಲಿ ಎಂಟ್ರಿಯಾಗಿಲ್ಲ ಎನ್ನುವ ಒಂದು ತಾಂತ್ರಿಕ ದೋಷಕ್ಕೆ ನಾವು ಅರ್ಜಿಗಳನ್ನು ಪರಿಗಣಿಸುವುದಕ್ಕೆ ಆಗುತ್ತಿಲ್ಲ. ಅದನ್ನೂ ಕೂಡ ಮಾನ್ಯ ಸಚಿವರು ಗಮನಿಸಬೇಕು. ಅದರ ಬಗ್ಗೆ ತಾವು ಜಿಲ್ಲಾಧಿಕಾರಿಗಳಿಗೆ ಆದೇಶ ಕೊಟ್ಟು, ಯಾರು ಅರ್ಜಿ ಕೊಟ್ಟಿದ್ದಾರೆ, ಯಾವುದು ಎಂಟ್ರಿ ಆಗಿಲ್ಲ ಅಂತಹವರಿಗೆ ಅವಕಾಶ ಕೊಡಬೇಕೆಂದು ನಿರ್ದಿಷ್ಟವಾಗಿ ಸೂಚನೆ ಕೊಡಬೇಕು.

(ಗೊಂದಲ)

ಮಾನ್ಯ ಸದಸ್ಯರು : ಕಂಡೀಷನ್ ಮತ್ತು ಎಕ್ಸಸ್ ಲ್ಯಾಂಡ್ ಬಗ್ಗೆ ಹೇಳಲಿಲ್ಲ.

ಉಪಾಧ್ಯಕ್ಷರು : ಕುಳಿತುಕೊಳ್ಳಿ. ಇದು ಸರಿಯಲ್ಲ ನೀವು ಮಾಡುತ್ತಿರುವುದು. ಎಲ್ಲರೂ ಇಂಟರ್‌ಫಿಯರ್ ಮಾಡಿದರೆ ಹೇಗೆ?

ಶ್ರೀ ಬಿ. ಸೋಮಶೇಖರ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕುಮಾರಸ್ವಾಮಿಯವರು ಹೇಳಿದ ಹಾಗೆ ಕೆಲವು ಅರ್ಜಿ ಸಲ್ಲಿಸಿದ್ದರೂ ಅಂತಹವರಿಗೆ ತಾಂತ್ರಿಕ ಕಾರಣಗಳಿಂದ ಅದನ್ನು ರಿಜೆಕ್ಟ್ ಮಾಡಿರಬಹುದು. ನಾನು ಆಗಲೇ ಹೇಳಿದ್ದೇನೆ, ಜಿಲ್ಲಾಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟು ಅವರೇ ಸ್ಥಳ ಪರಿಶೀಲನೆ ಮಾಡಿ, ನಿಜವಾಗಿ ಯಾರ ಸ್ವಾಧೀನದಲ್ಲಿ ಕೆಲಸ ಮಾಡುತ್ತಿದ್ದಾರೆ, ಅಂಥವರನ್ನು ಅವರೇ ಸ್ಯಾಟಿಸ್‌ಫೈ ಮಾಡಿದಮೇಲೆ ಅಂತಹವರಿಗೆ ಸಕ್ರಮ ಮಾಡತಕ್ಕಂಥ ಅವಕಾಶ ತರತಕ್ಕಂಥ ಈ ಒಂದು ಬಿಲ್‌ನಲ್ಲಿ ಇದೆ. ಅದನ್ನು ನಾವು ಈಗ ಸಧ್ಯಕ್ಕೆ 2 ಎಕರೆ ಹೊಂದಿರತಕ್ಕಂಥ ಬಡವರು ಮತ್ತು ಸಣ್ಣ ಹಿಡುವಳಿದಾರರು ಯಾರಿದ್ದಾರೆ ಅವರಿಗೆ ಮಾಡೋಣ. ಎಕ್ಸೆಸ್ ಲ್ಯಾಂಡ್ ಬಗ್ಗೆ ಪರಿಶೀಲನೆ ಮಾಡುತ್ತೇವೆ.

ವಿಧಾನ ಸಭಾ ವಿಟ್ಲ ಕ್ಷೇತ್ರದಲ್ಲಿ ಗಂಗಾ ಕಲ್ಯಾಣ ಯೋಜನೆ

166 - ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಟ್ಲ ವಿಧಾನಸಬಾ ಕ್ಷೇತ್ರದಲ್ಲಿ ಮಂಜೂರಾಗಿರುವ ಗಂಗಾ ಕಲ್ಯಾಣ ಯೋಜನೆಗಳು ಎಷ್ಟು? (ವಿವರ ನೀಡುವುದು)*

ಅ) ವಿದ್ಯುತ್ ಮತ್ತು ಹಣದ ಅಡಚಣೆಯಿಂದ ಈ ಯೋಜನೆಗಳು ಸರಿಯಾಗಿ ನಡೆಯದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಅವುಗಳನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ (ಸಮಾಜ ಕಲ್ಯಾಣ ಸಚಿವರು)-:

ಅ) ಈ ಕ್ಷೇತ್ರದಲ್ಲಿ ಕರ್ನಾಟಕ ಪರಿಶಿಷ್ಟ ಜಾತಿ: ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯನ್ನು ಅನುಷ್ಠಾನಗೊಳಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೇ, ಗಂಗಾ ಕಲ್ಯಾಣ ಯೋಜನೆ ನಮ್ಮ ರಾಜ್ಯದಲ್ಲಿ ಪರಿಶಿಷ್ಟ ಜಾತಿ ಪಂಗಡಗಳ ಕಾಲೋನಿಗಳಲ್ಲಿ ಕಾರ್ಯಾಚರಣೆ ಮಾಡುತ್ತಿವೆ. ಯಾವುದೂ ಕೂಡ ಗಂಗಾ ಕಲ್ಯಾಣ ಯೋಜನೆಗಳು ಸಮರ್ಪಕವಾಗಿ ಕಾರ್ಯಾಚರಣೆ ಮಾಡುತ್ತಿಲ್ಲ. ವಿದ್ಯುತ್ತಿನ ಕೊರತೆ, ಹಣದ ಅಡಚಣೆ ಮತ್ತು ಸರಿಯಾದ ಮೇಂಟೆನೆನ್ಸ್ ಇಲ್ಲದೆ ಇರುವ ಕಾರಣ ಸಾಧಾರಣವಾಗಿ ಗಂಗಾ ಕಲ್ಯಾಣ ಯೋಜನೆಗಳು ಸಮರ್ಪಕವಾಗಿ ಕೆಲಸ ಮಾಡದೇ ಇದ್ದ ಕಾರಣ ಅದರ ಉದ್ದೇಶದ ಪ್ರಯೋಜನ ಸಿಗುತ್ತಿಲ್ಲ. ಅದಕ್ಕಾಗಿ ನಾನು ಪ್ರಶ್ನೆಯನ್ನು ಕೇಳಿದ್ದೇನೆ. ನನ್ನ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಗಂಗಾ ಕಲ್ಯಾಣ ಯೋಜನೆಗಳು ಮಂಜೂರಾಗಿ ಕೆಲಸ ಮಾಡುತ್ತಿವೆ ಎಂದು ಕೇಳಿದರೆ ಅದಕ್ಕೆ ಅವರು ಯಾವುದೂ ಕೂಡ ಮಂಜೂರಾಗಿಲ್ಲ, ಅನುಷ್ಠಾನದಲ್ಲಿ ಇಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ಒಂದಕ್ಕೊಂದು ಸಂಬಂಧವಿಲ್ಲ. ನನ್ನ ವಿಧಾನಸಭಾ ಕ್ಷೇತ್ರದಲ್ಲಿ 3-4 ಯೋಜನೆಗಳು ಇವತ್ತು ಕಾರ್ಯಾಚರಣೆ ಮಾಡುತ್ತಿವೆ. ಆದರೆ ಕಾರ್ಯಾಚರಣೆ ಮಾಡುತ್ತಿಲ್ಲವೆಂದು ಉತ್ತರ ಕೊಟ್ಟಿದ್ದಾರೆ. ಅದಕ್ಕೆ ನನಗೆ ಸರಿಯಾದ ಉತ್ತರ ಬೇಕಾಗಿದೆ.

ಶ್ರೀ ಕೆ. ಎಂ. ಕೃಷ್ಣಾರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಯಾವುದೇ ಕಡೆ ಗಂಗಾ ಕಲ್ಯಾಣ ಯೋಜನೆಯನ್ನು ಕೈಗೆತ್ತಿಕೊಳ್ಳಬೇಕಾದರೆ ಅಂತರ್ಜಲ ಇರಬೇಕಾಗುತ್ತದೆ. ಮಾನ್ಯ ಸದಸ್ಯರ ಕ್ಷೇತ್ರದಲ್ಲಿ ಅಂತರ್ಜಲ ಇಲ್ಲವೆಂದು ನನಗೆ ಒಂದು ಮಾಹಿತಿ ಬಂದಿದೆ. ಅಲ್ಲಿ ತೋಡು ಬಾವಿಗಳ ಡಿಮ್ಯಾಂಡ್ ಇದೆ. 15-20 ಅಡಿಗಳಿಗೆ ನೀರು ಸಿಗುತ್ತದೆ. ಆದರೆ 250-300 ಅಡಿ ಹೋದರೆ ನೀರು ಸಿಗುವುದಿಲ್ಲ. ಅಂತರ್ಜಲ ಇಲ್ಲದೇ ಇರುವ ಕಡೆ ಏನು ನಾವು ಕಾರ್ಯಕ್ರಮ ತೆಗೆದುಕೊಳ್ಳುವುದು. ಇಡೀ ರಾಜ್ಯದಲ್ಲಿ 9,000 ಮೇಲ್ಪಟ್ಟು ಕೊಳವೆ ಬಾವಿಗಳನ್ನು ಹಾಕಿದ್ದೇವೆ. ಹಣದ ಪ್ರಶ್ನೆ ಇಲ್ಲ. ತಮ್ಮ ಕ್ಷೇತ್ರದಲ್ಲಿ ಅಂತರ್ಜಲ ಇದೆ ಎಂದು ಗೊತ್ತಾದರೆ ತೆಗೆದುಕೊಳ್ಳುತ್ತೇವೆ. ಆದರೆ ಅಲ್ಲಿ ಅಂತರ್ಜಲ ಇಲ್ಲವೆಂದು ನಮಗೆ ವರದಿ ಬರುತ್ತಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಒಂದಕ್ಕೊಂದು ಸಂಬಂಧ ಇಲ್ಲ. ನಾನು ಕೇಳುತ್ತಿರುವಂತಹ ಪ್ರಶ್ನೆ ಏನಿದೆ ಎಂದರೆ ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿ ಮಂಜೂರಾಗಿರುವಂತಹ ಗಂಗಾ ಕಲ್ಯಾಣ ಯೋಜನೆಗಳು

ಎಷ್ಟು? ಅದರ ವಿವರಬೇಕೆಂದು ಕೇಳಿದ್ದೇನೆ. ನನ್ನ ವಿಧಾನಸಭಾ ಕ್ಷೇತ್ರದಲ್ಲಿ 3-4 ಯೋಜನೆಗಳು ಇವತ್ತು ಕಾರ್ಯಾಚರಣೆ ಮಾಡುತ್ತಿವೆ. ಆದರೆ ಸರಿಯಾಗಿ ಕಾರ್ಯಾಚರಣೆ ಮಾಡುತ್ತಿಲ್ಲ. ಅದಕ್ಕೆ ನಾನು ಅದರ ಬಗ್ಗೆ ಸರಿಯಾದ ಉತ್ತರಬೇಕೆಂದು ಕೇಳಿದ್ದೇನೆ. ಅದಕ್ಕೆ ಇವರು ಅಲ್ಲಿ ಕಾರ್ಯಾಚರಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಆದುದರಿಂದ ಗಂಗಾ ಕಲ್ಯಾಣ ಯೋಜನೆ ಬಗ್ಗೆ ಸರಿಯಾದಂತಹ ಮಾಹಿತಿ ಕೊಡಬೇಕು.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಆ ಕ್ಷೇತ್ರದಲ್ಲಿ ನಾವು ಗಂಗಾ ಕಲ್ಯಾಣ ಯೋಜನೆ ಕಾರ್ಯಕ್ರಮವನ್ನು ಹಾಕಿಕೊಂಡೇ ಇಲ್ಲ. ಕಾರಣ ಅಂತರ್ಜಲ ಇಲ್ಲ ಎಂದು.

ಮಾನ್ಯ ಸದಸ್ಯರು : ಹಾಗಾದರೆ ಅದು ಜಿಲ್ಲಾಪಂಚಾಯತ್ ಯೋಜನೆಗಳೇ ಅಥವಾ ಸಮಾಜ ಕಲ್ಯಾಣ ಯೋಜನೆಗಳೇ ಎಂಬುದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಸಮಾಜ ಕಲ್ಯಾಣ ಇಲಾಖೆಯಿಂದ ನನ್ನ ಕ್ಷೇತ್ರದಲ್ಲಿ 3-4 ಯೋಜನೆಗಳು ಇವತ್ತು ಕಾರ್ಯಾಚರಣೆ ಮಾಡುತ್ತಿವೆ. ಆದರೆ ಅವುಗಳು ಅಷ್ಟು ಸಮರ್ಪಕವಾಗಿ ಕಾರ್ಯಾಚರಣೆ ಮಾಡುತ್ತಿಲ್ಲ. ಅದಕ್ಕೆ ವಿದ್ಯುತ್ತಿನ ಕೊರತೆ, ಹಣದ ಕೊರತೆ ಮೇಂಟೇನ್ ಮಾಡುತ್ತಿಲ್ಲ. ಅದರ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೇನೆ. ಇದನ್ನು ನಾನು ಹೊಸದಾಗಿ ಕೇಳುತ್ತಿಲ್ಲ. ಇರುವ ಯೋಜನೆಗಳು ಸಮರ್ಪಕವಾಗಿ ಕೆಲಸ ಮಾಡಬೇಕೆಂದು ಕೇಳುತ್ತಿದ್ದೇನೆ.

ಉಪಾಧ್ಯಕ್ಷರು : ಅವರು ಕೇಳತಕ್ಕಂಥ ಪ್ರಶ್ನೆ ಈಗಾಗಲೇ ಅಲ್ಲಿ ಯೋಜನೆಗಳು ಇದ್ದು, ಅವುಗಳು ಸಮರ್ಪಕವಾಗಿ ಅನುಷ್ಠಾನಗೊಳಿಸುತ್ತಿಲ್ಲ, ಅದನ್ನು ಮಾಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡದ ನಿಗಮದಿಂದ ಕಾರ್ಯಾಚರಣೆ ಮಾಡುತ್ತಿಲ್ಲ. ಹಿಂದೆ ಜಿಲ್ಲಾ ಪಂಚಾಯತ್ ವತಿಯಿಂದ ಮಾಡಿರಬಹುದು. ನಮ್ಮ ಇಲಾಖೆ ವ್ಯಾಪ್ತಿಯಲ್ಲಿ ಬರುವುದಿಲ್ಲ. ಅಲ್ಲಿ ನೀರಿನ ಬಿಂದುಗಳು ಸಿಗುತ್ತಿಲ್ಲವೆಂದು ರಿಪೋರ್ಟ್ ಇದೆ.

ಮಾನ್ಯ ಸದಸ್ಯರು : ಅಲ್ಲಿ ಅಂತರ್ಜಲ ಇಲ್ಲ ಎಂದು ಹೇಳುತ್ತಿದ್ದಾರೆ. ಹಾಗಾದರೆ ಅಲ್ಲಿ ಜನ ಬದುಕುವುದಕ್ಕೆ ವ್ಯವಸ್ಥೆ ಇಲ್ಲವೇ? ಬದಲಿ ಕಾರ್ಯಕ್ರಮ ಉಂಟಾ? ಅಂತರ್ಜಲ ಇಲ್ಲದಿದ್ದರೆ ಏನು ಕ್ರಮ ಹಾಕುತ್ತೀರಿ?

ಶ್ರೀ ಎ. ರುಕ್ಮಯ್ಯ ಪೂಜಾರಿ : ನಾನು ಕೇಳುತ್ತಿರುವುದು, ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿ ಮಂಜೂರಾಗಿರುವ ಗಂಗಾ ಕಲ್ಯಾಣ ಯೋಜನೆಗಳು ಎಷ್ಟು ಮಂಜೂರಾಗಿ ಕಾರ್ಯಾಚರಣೆ ಮಾಡುತ್ತಿವೆ ಎಂಬುದು. ಹೊಸದಾಗಿ ಇದನ್ನು ನಾನು ಕೇಳುತ್ತಿಲ್ಲ.

ಉಪಾಧ್ಯಕ್ಷರು : ಅವರು ಕೇಳತಕ್ಕಂಥ ಪ್ರಶ್ನೆ ವಿಟ್ಲ ವಿಧಾನಸಭಾ ಕ್ಷೇತ್ರದಲ್ಲಿ ಮಂಜೂರಾಗಿರುವ ಗಂಗಾ ಕಲ್ಯಾಣ ಯೋಜನೆಗಳು ಎಷ್ಟು?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಗಂಗಾ ಕಲ್ಯಾಣ ಯೋಜನೆಯನ್ನು ನಾವು ಅಲ್ಲಿ ತೆಗೆದುಕೊಂಡಿಲ್ಲ.

ಶ್ರೀ ಬಿ. ನಂಜಾಮರಿ : ಮಾನ್ಯ ಉಪಾಧ್ಯಕ್ಷರೇ, ನಮ್ಮ ತಿಪಟೂರು ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಬೋರ್‌ವೆಲ್ ಕೊರೆಸಿ....

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ಗಂಗಾ ಕಲ್ಯಾಣ ಯೋಜನೆಯಲ್ಲಿ ನಾವು ಕಾರ್ಯಕ್ರಮ ಹಾಕಿಕೊಳ್ಳಬೇಕಾದರೆ ನೀರಿನ ಮಟ್ಟ ಏನಿದೆ ಎನ್ನುವುದಕ್ಕೆ ಒಂದು ಸರ್ವೇ ನಡೆಯುತ್ತಿದೆ. ಕೆಲವು ಕಡೆ ಡಾರ್ಕ್ ಏರಿಯ ಇರುತ್ತದೆ. ಅಲ್ಲಿ ತೆಗೆದುಕೊಳ್ಳುತ್ತಿಲ್ಲ.

ಉಪಾಧ್ಯಕ್ಷರು : ಗುತ್ತೇದಾರರು ಉತ್ತರ ಹೇಳುತ್ತಾರೆ.

ಶ್ರೀ ಬಿ. ನಂಜಾಮರಿ : ಒಂದು ಬೋರ್‌ವೆಲ್‌ಗೆ, 3,000 ರೂಪಾಯಿ ಕೊಡುವುದಿಲ್ಲ ಎಂದರೆ ವಾಪಸ್ಸು ತೆಗೆದುಕೊಂಡು ಹೋಗಿದ್ದಾರೆ. ನಮ್ಮ ತಿಪಟೂರು ಕ್ಷೇತ್ರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಬೋರ್‌ವೆಲ್ ಕೊರೆದಿಲ್ಲ.

ಉಪಾಧ್ಯಕ್ಷರು : ನೀವು ಅದಕ್ಕೆ ಬೇರೆ ಪ್ರಶ್ನೆ ಕಳುಹಿಸಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರೀ ತೆಗೆಯುವ ಬಾವಿ. ಇನ್ನು ಆಳವಾಗಿ ಹೋದರೆ ನೀರು ಸಿಗುವುದಿಲ್ಲವೆಂದು ವರದಿ ಇದೆ. ಪರಿಶಿಷ್ಟ ಜಾತಿ ವರ್ಗದ ನಿಗಮದಿಂದ ಯಾವುದೇ ಒಂದು ಯೋಜನೆಯನ್ನು ತಮ್ಮ ಕ್ಷೇತ್ರದಲ್ಲಿ ತೆಗೆದುಕೊಂಡಿಲ್ಲವೆಂದು ಉತ್ತರ ಹೇಳಿದೆ. ಅದಕ್ಕೆ ಪ್ರಶ್ನೆ ಉದ್ಭವಿಸುವುದಿಲ್ಲ. ಅದು ಹಿಂದೆ ಜಿಲ್ಲಾ ಪಂಚಾಯತ್‌ನಲ್ಲಿ ತೆಗೆದುಕೊಂಡ ಕಾರ್ಯಕ್ರಮ ಇರಬಹುದು.

ಉಪಾಧ್ಯಕ್ಷರು : ಸಾಕು, ಈಗ ಡಿ.ಆರ್. ಪಾಟೀಲ್ ಪ್ರಶ್ನೆ ಕೇಳಿ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಪ್ರಶ್ನೆ ಕೇಳಿ ಅದಕ್ಕೆ ಉತ್ತರವನ್ನು ಕೊಡದಿದ್ದರೆ ಹೇಗೆ?

ಶ್ರೀ ಹೆಚ್.ಎನ್. ನಂಜೇಗೌಡ : ಸಮಾಧಾನವಾಗಿ ಎಂದು ಉತ್ತರ ಕೊಡುವುದಕ್ಕಾಗುವುದಿಲ್ಲ. ಎಂದರೆ ಹೇಗೆ? ಸಮಾಧಾನವಾಗಿ ಎಂದರೆ ಇಲ್ಲ ತೆಗೆದುಕೊಳ್ಳುತ್ತೇವೆ, ಪರಿಶೀಲಿಸುತ್ತೇವೆಂದು ಹೇಳಬೇಕು.

ಶ್ರೀ ಎ. ರುಕ್ಮಯ್ಯ ಪೂಜಾರಿ : ಗಂಗಾ ಕಲ್ಯಾಣ ಯೋಜನೆಯಲ್ಲಿ ಮಂಜೂರಾಗಿರುವ ಯೋಜನೆಗಳು ಎಷ್ಟು?

ಶ್ರೀ ಹೆಚ್.ಎನ್. ನಂಜೇಗೌಡ : ಮಂಜೂರಾಗಿದೆಯೇ?

ಶ್ರೀ ಎ. ರುಕ್ಮಯ್ಯ ಪೂಜಾರಿ : ಆಗಿದೆ, ಕಾರ್ಯಾಚರಣೆ ಮಾಡುತ್ತಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಅವರೇ ಮಂಜೂರಾಗಿದೆ, ಕೆಲಸ ಈಗ ಕರೆಂಟ್ ಇಲ್ಲದೆ ನಿಂತಿದೆ ಎಂದು ಹೇಳುತ್ತಿದ್ದಾರೆ. ಸ್ವಲ್ಪ ಕಷ್ಟವಾಗುತ್ತದೆ. ನಾವು ಇನ್ನು ಮೆಂಬರ್ಸ್‌ನ್ನು ಆಕ್ಟಿವೈಸ್ ಮಾಡಿಲ್ಲ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಅವರು ನಿಗಮದಿಂದ ಮಂಜೂರಾತಿ ಆಗಿದೆ ಎಂದು ತಿಳಿದುಕೊಂಡಿದ್ದಾರೆ. ಹಿಂದೆ ಜಿಲ್ಲಾ ವ್ಯಾಪ್ತಿಯಲ್ಲಿ ಒಂದು ಕಾರ್ಯಕ್ರಮ ಹಾಕುತ್ತಿದ್ದರು. ಅದರಲ್ಲಿ ಕೊಳವೆಬಾವಿ ಹಾಕುವ ಕೆಲಸ ಮಾತ್ರ ಮಾಡುತ್ತಿದ್ದರು. ಅದರ ಮಂಜೂರಾತಿ ಇರಬಹುದು. ಅವರು ಕೇಳುತ್ತಿರುವುದು ಗಂಗಾ

ಕಲ್ಯಾಣ ಯೋಜನೆಯನ್ನು ಪರಿಶಿಷ್ಟ ಜಾತಿ, ಪಂಗಡದ ನಿಗಮದಿಂದ ನಾವು ಕಾರ್ಯಕ್ರಮವನ್ನು ಹಾಕಿಲ್ಲ. ಕಾರಣವೇನೆಂದರೆ ಅಲ್ಲಿ ಅಂತರ್ಜಲವಿಲ್ಲ. ಅಂತರ್ಜಲ ಇದೆಯೋ ಇಲ್ಲವೋ ಅದನ್ನು ನಾನು ಬೇಕಾದರೆ ಪರಿಶೀಲನೆ ಮಾಡುತ್ತೇನೆ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಗಂಗಾ ಕಲ್ಯಾಣ ಯೋಜನೆ ಯಾವ ಇಲಾಖೆಗೆ ಬರುತ್ತದೆ? ಪ್ರಶ್ನೆ ಮುಂದಕ್ಕೆ ಹಾಕಿ ಉತ್ತರ ಕೊಡಿಸಿ.

ಉಪಾಧ್ಯಕ್ಷರು : ಅವರು ಉತ್ತರ ಕೊಡುತ್ತಾರೆ, ಕುಳಿತುಕೊಳ್ಳಿ. ಎಲ್ಲರೂ ಎದ್ದು ನಿಂತರೆ ಹೇಗೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ಸದಸ್ಯರಿಗೆ ಆಶ್ವಾಸನೆಯನ್ನು ಕೊಡುತ್ತೇನೆ. ಅಂತರ್ ಜಲದ ಬಗ್ಗೆ ಮತ್ತೊಂದು ಸಲ ಪರಿಶೀಲನೆ ಮಾಡಿಸುತ್ತೇನೆ. ಅಂತರ್ ಜಲವಿದೆ ಎಂದರೆ ಅದರ ಬಗ್ಗೆ ನಾವು ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎ. ರುಕ್ಮಯ್ಯ ಪೂಜಾರಿ : ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಮಂಜೂರಾಗಿರುವಂತಹ ಯೋಜನೆಗಳು ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಅದರ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಗಂಗಾ ಕಲ್ಯಾಣ ಯೋಜನೆ ತಮ್ಮ ಇಲಾಖೆಗೆ ಬರದೇ ಅಲ್ಲಿ ಕೆಲಸ ನಡೆಯುತ್ತಿದೆ ಎಂದು ಹೇಳುತ್ತಿದ್ದಾರೆ. ಆದರೆ ತಾವು ತಮಗೆ ಗೊತ್ತಿಲ್ಲವೆಂದು ಹೇಳುತ್ತಿದ್ದೀರಿ, ಇದಕ್ಕಿಂತ ವಿಪರ್ಯಾಸ ಇನ್ನು ಏನು ಆಗಬೇಕಾಗಿದೆ?

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ಮಾನ್ಯ ಉಪಾಧ್ಯಕ್ಷರೆ, ಹಿಂದೆ ಏನಾದರೂ ಮಂಜೂರಾತಿಯಾಗಿದ್ದರೆ ಅದು ರೂರಲ್ ಡೆವಲಪ್‌ಮೆಂಟ್‌ನಲ್ಲಿ ಬರುತ್ತದೆ. ಇಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ವತಿಯಿಂದ ಇಲ್ಲವೆಂದು ಹೇಳುತ್ತಿದ್ದೇನೆ. ಆದುದರಿಂದ ತಾವು ದಯಮಾಡಿ ನನಗೆ ಮಾಹಿತಿಯನ್ನು ಕೊಡಿ. ಅದು ಯಾವ ಯೋಜನೆ ಎಂದು ನೋಡುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಉಪಾಧ್ಯಕ್ಷರೆ, ಇದು ಜಿಲ್ಲಾ ಪರಿಷತ್ತಿನಿಂದ ವರ್ಗಾವಣೆಯಾದರೆ ಇರಬಹುದು, ಆ ಪ್ರಕಾರ ವರ್ಗಾವಣೆಯಾಗದೆ ನಿಮಗೆ ಅದರ ಸಮಸ್ಯೆ ಆಗಿದೆ. ತಾವು ದಯಮಾಡಿ ಇದು ಸಮಾಜ ಕಲ್ಯಾಣ ಇಲಾಖೆಗೆ ಸೇರುತ್ತದೆಯೋ ಅಥವಾ ಜಿಲ್ಲಾ ಪಂಚಾಯತ್‌ಗೆ ಸೇರುತ್ತದೆಯೋ ಎಂಬುದನ್ನು ಹೇಳಿ.

ಶ್ರೀ ಕೆ.ಎಂ. ಕೃಷ್ಣಾರೆಡ್ಡಿ : ದಯಮಾಡಿ ತಾವು ಮಾಹಿತಿಯನ್ನು ಕೊಟ್ಟರೆ ಜಿಲ್ಲಾಮಟ್ಟದಲ್ಲಿ ಏನಾದರೂ ಆಗಿದ್ದರೆ ಅದನ್ನು ತಕ್ಷಣ ನಾನು ಪರಿಶೀಲನೆ ಮಾಡುತ್ತೇನೆ. ಮತ್ತೆ ಅಂತರ್ ಜಲ ಇದೆಯೆನ್ನುವಂಥಾದ್ದರ ಬಗ್ಗೆ ಮತ್ತೊಂದು ಸಲ ಪರಿಶೀಲನೆ ಮಾಡಿಸುತ್ತೇನೆ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಸಗೀರ್ ಅಹಮದ್‌ರವರೇ, ತಾವು ದಯಮಾಡಿ ಕುಳಿತುಕೊಳ್ಳಿ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.